ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 27- 32
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಮೈಸೂರು ಒಡೆಯರ ಕಾಲದ ನೇಕಾರ ಸಮುದಾಯ

**ದೀಕ್ಷಾ ಚೌದ್ರಿ*[*]**

[*]ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***

*ನೇಕಾರಿಕೆ ಅತ್ಯಂತ ಪ್ರಾಚೀನ ವೃತ್ತಿ ಇದು ಇತಿಹಾಸ ಪೂರ್ವದಿಂದಲೂ ನಾಗರಿಕತೆ ಮತ್ತು ಸಂಸ್ಕೃತಿಯೊಂದಿಗೆ ಬೆರೆತುಕೊಂಡಿದೆ. ನೇಕಾರಿಕೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸಿದೆ. ದೇವರು ಆಕಾಶ ಮತ್ತು ಭೂಮಿಯನ್ನು ಮಗ್ಗಮಾಡಿ ಸೂರ್ಯ ಚಂದ್ರರನ್ನು ಹಾಸು ಹೊಕ್ಕಾನ್ನಾಗಿ ಸೃಷ್ಠಿಯನ್ನು ನೇಯ್ದಿದ್ದಾನೆ. ಪ್ರಾಚೀನ ಭಾರತದಲ್ಲಿ ನೇಕಾರರಿಗೆ ಪ್ರಮುಖ ಸ್ಥಾನವಿತ್ತು ನೇಕಾರರು ಮಗ್ಗದ ಮೇಲೆ ಲಾಳಿ ಎಸೆಯುವಂತೆ ರಾತ್ರಿ ಮತ್ತು ಹಗಲು ಭೂಮಿಯ ಮೇಲೆ ಬೇಳಕು ಮತ್ತು ಕತ್ತಲನ್ನು ಚೆಲ್ಲುತ್ತವೆ ಎಂಬ ಉಪಮೆ ಅಥರ್ವಣ ವೇದದಲ್ಲಿದೆ. ಈ ಹಿನ್ನಲೆಯಲ್ಲಿ ಮೈಸೂರು ಒಡೆಯರ ಕಾಲದದಲ್ಲಿ ನೇಕಾರ ಸಮುದಾಯದ ಸ್ಥಿತಿಗತಿಯ ಬಗ್ಗೆ ಪ್ರಸ್ತುತ ಲೇಖನವು ಬೆಳಕು ಚೆಲ್ಲುತ್ತದೆ.*

***Keywords:*** *ನೇಕಾರಿಕೆ, ಕೈಮಗ್ಗ, ನೇಕಾರ ಸಮುದಾಯ, ಮೈಸೂರು ಅರಸರು.*

## ಪೀಠಿಕೆ

ಇತಿಹಾಸ ಪೂರ್ವದಿಂದ ಬೆಳೆದು ಬಂದ ನೇಕಾರಿಕೆ ಭಾರತದ ಇತರ ಭಾಗಗಳಲ್ಲಿದ್ದಂತಯೇ ಕರ್ನಾಟಕದಲ್ಲಿಯೂ ಅತಿ ಹಿಂದಿನಿಂದಲೂ ವ್ಯವಸ್ಥಿತ ಉದ್ಯಮವಾಗಿ ಬೆಳೆದು ಬಂದಿರುವುದನ್ನು ಅನೇಕ ಚಾರಿತ್ರಿಕ ದಾಖಲೆಗಳು ಖಚಿತಪಡಿಸುತ್ತವೆ. ಕ್ರಿ.ಶ 12ನೇ ಶತಮಾನದಲ್ಲಿದ್ದ ಜೇಡರ ದಾಸಿಮಯ್ಯ ನೇಕಾರಿಕೆ ಕಸುಬನ್ನು ಅವಲಂಬಿಸಿದ್ದ ಬಗ್ಗೆ ಅವನ ವಚನಗಳಿಂದಲೇ ಸಾಕಷ್ಟು ಆಧಾರ ಸಿಗುತ್ತದೆ. ಮುಂದೆ ಹೊಯ್ಸಳ, ವಿಜಯನಗರ ಅರಸರ ಕಾಲದಲ್ಲಿ ಹತ್ತಿ ಬಟ್ಟೆಯನ್ನು ನೇಯುವ ಜನ ವೃತ್ತಿಪರ ಸಂಘಗಳನ್ನು ಸಹ ಕಟ್ಟಿಕೊಂಡಿದ್ದರು. ಆದಿಕರ್ನಾಟಕ, ದೇವಾಂಗ, ಪದ್ಮಸಾಲಿ ಸಮುದಾಯಗಳು ಮೈಸೂರು ಸಂಸ್ಥಾನದಲ್ಲಿ ಪ್ರಾರಂಭದಿಂದಲೂ ನೇಯ್ಗೆ ಕಸುಬಿನಲ್ಲಿ ನಿರತರಾಗಿದ್ದು ಸಾಮ್ರಾಜ್ಯದ ಪ್ರಮುಖ ತೆರಿಗೆ ಸಂದಾಯದಾರರಾಗಿದ್ದರೆಂದು ದಾಖಲೆಗಳಿಂದ ತಿಳಿದುಬರುತ್ತದೆ.

ಬೃಹಸ್ಪತಿಯು ಇಂದ್ರನಿಗೆ ಅಮರತ್ವದ ವಸ್ತ್ರವನ್ನು ತೊಡಿಸಿದ ರೀತಿಯಲ್ಲೇ ನಾನು ಸಹ ನಿನಗೆ ಈ ವಸ್ತ್ರವನ್ನು ತೊಡಿಸಿ ದೀರ್ಘಾಯುಷ್ಯ, ಉತ್ತಮ ವೃದ್ಧಾಪ್ಯ ಶಕ್ತಿ ಮತ್ತು ವೈಭವನ್ನು ಕೋರುತ್ತಾನೆ ಎಂದು ಆಚಾರ್ಯನು ಉಪನಯನದ ಸಮಯದಲ್ಲಿ ವಟುವಿಗೆ ವಸ್ತ್ರ ಸಲ್ಲಿಸುತ್ತಾನೆ (ಹಿರಣ್ಯ ಕೇಶಿ ಗೃಹಸೂತ್ರ) ತಂತು ವರ್ಧನ ಅಥವಾ ನೇಕಾರನೆಂದು ವರ್ಣಿಸಲಾಗುವ ವಿಷ್ಣು ಸೂರ್ಯನ ಕಿರಣಗಳನ್ನು ನೇಯ್ದು

***Please cite this article as:*** ದೀಕ್ಷಾ ಚೌದ್ರಿ. (2022). ಮೈಸೂರು ಒಡೆಯರ ಕಾಲದ ನೇಕಾರ ಸಮುದಾಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(4), 27–32.

ತನಗಾಗಿ ಒಂದು ವಸ್ತ್ರವನ್ನು ಸಿದ್ಧಪಡಿಸಿದ ವರ್ಣನೆಯು ಇದೆ ಋಗ್ವೇದ ಮತ್ತು ಸಂಗಂ ಸಾಹಿತ್ಯದಲ್ಲಿ ಅನೇಕ ಪ್ರಸ್ತಾಪಗಳಿವೆ.

ಕ್ರಿಸ್ತ ಯುಗದ ಆರಂಭದ ವೇಳೆಗೆ ಜವಳಿ ಭಾರತ ಮತ್ತು ರೋಮ್ ಸಾಮ್ರಾಜ್ಯದ ನಡುವಣ ವ್ಯಾಪಾರದ ಒಂದು ಪ್ರಮುಖ ಅಂಗವಾಗಿತ್ತು. ರೋಮ್‌ನ ಇತಿಹಾಸ ತಜ್ಞ ಅರ್ರಿಯನ್ ಮಸೂಲಿಯಾ (ಮಚಲಿಪಟ್ಟಣ)ದಿಂದ ರಂಗು ಹಾಕಿದ ವಸ್ತ್ರಗಳ ರಫ್ತನ್ನು ವಿವರಿಸಿದ್ದಾನೆ. 4ನೇ ಶತಮಾನದಲ್ಲಿ ಸಂತ ಜೆರೊಮ್ ಕೈಗೊಂಡ ಬೈಬಲಿನ ಲ್ಯಾಟಿನ್ ಅನುವಾದದಲ್ಲಿ ಜ್ಞಾನಾರ್ಜನೆ, ಭಾರತದ ರಂಗು ವಸ್ತ್ರಗಳಿಗಿಂತ ಹೆಚ್ಚು ಕಾಲ ಬಾಳಿಕೆ ಬರುತ್ತದೆ ಎಂದು ಹೇಳಲಾಗಿದ್ದು ಇದು ಭಾರತದ ವಸ್ತ್ರಗಳ ಗುಣಮಟ್ಟವನ್ನು ನಿರೂಪಿಸುತ್ತದೆ.

**ನೇಕಾರರಲ್ಲಿ ಒಳಪಂಗಡಗಳು**

ನೇಕಾರರಲ್ಲಿ ಹಲವು ಒಳಪಂಗಡಗಳಿದ್ದವು ಪ್ರಮುಖವಾಗಿ ಮೈಸೂರು ಸಂಸ್ಥಾನವು ಕೈಗಾರಿಕೆಗಳಲ್ಲಿ ಪ್ರಧಾನವಾದುದಾಗಿತ್ತು ಹಾಗೂ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಸಮಕಾಲೀನ ಶಾಸನಗಳಲ್ಲಿ ನೇಯ್ಗೆ, ಮಗ್ಗದವರಿಗೆ, ಮಗ್ಗದ ಕಾಣಿಕೆ, ಹತ್ತಿ ಪೊಮ್ಮು ಎಂದಿತ್ಯಾದಿ ಉಲ್ಲೇಖಗಳಿರುವುದು ಗಮನಾರ್ಹ. ದೇವಾಂಗ ಸಮುದಾಯದವರು ಹೆಚ್ಚಿನ ಪ್ರಮಾಣದಲ್ಲಿ ಈ ವೃತ್ತಿಯಲ್ಲಿ ತೊಡಗಿದ್ದಾರೆ.

ನೇಕಾರರು ದೇವಾಲಯಗಳಿಗೆ ಹಾಗೂ ರಾಜರಿಗೆ ಬೆಳೆಬಾಳುವ ವೈವಿಧ್ಯಮಯ ವಸ್ತ್ರಗಳನ್ನು ನೇಯ್ದು ಒದಗಿಸಬೇಕಾಗಿದ್ದರಿಂದ ಅವರು ದೇವಾಲಯ ಹಾಗೂ ಅರಮನೆ ವಲಯದಲ್ಲಿ ವಾಸಿಸುವ ಅವಕಾಶ ಹಾಗೂ ತೆರಿಗೆ ವಿನಾಯಿತಿ ಮುಂತಾದ ಸೌಲಭ್ಯಗಳನ್ನು ರಾಜರಿಂದ ಪಡೆದಿದ್ದರು. ಕೆಲವು ಸಂದರ್ಭದಲ್ಲಿ ರಾಜರು ತೆರಿಗೆಯನ್ನು ಹೆಚ್ಚಿಸಿದಾಗ ಭಿನ್ನಬೇಧ ಮರೆತು ಪ್ರತಿಭಟಿಸಿದ ಪ್ರಸಂಗಗಳು ಕಾಣಬರುತ್ತವೆ.

**ವಸ್ತ್ರಗಳಿಗೆ ಬಣ್ಣಹಾಕುವುದು**

ಸಂಗಂ ಸಾಹಿತ್ಯವನ್ನು ಅವಲೋಕಿಸದಾಗ ಆ ಸಾಹಿತ್ಯದಲ್ಲಿ ಬಟ್ಟೆಗಳಿಗೆ ಬಣ್ಣ ಹಾಕುವ ಉಲ್ಲೇಖವಿದೆ. ನೀಲಿ ಬಣ್ಣ ಮತ್ತು ಸಸ್ಯ ಜನ್ಯ ಬಣ್ಣಗಳನ್ನು ಬಳಸುತ್ತಿದ್ದ ಬಗ್ಗೆ '*ಮಿತಾಕ್ಷಾರ ಸಂಹಿತೆ*' ಮತ್ತು '*ಮಾನಸೋಲ್ಲಾಸ*' ಕೃತಿಗಳಲ್ಲಿಯೂ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ನೀಲಿ ಮತ್ತು ಮಂಜಿಸ್ಟ ಬಣ್ಣವನ್ನು ಜಿದ್ದಾದ (ಮಿಡಲ್ ಈಸ್ಟ್) ಮುಖಾಂತರ ಆಮದು ಮಾಡಿಕೊಳ್ಳುತ್ತಿದ್ದರು.

**ನೇಕಾರರ ಸಂಘಟನೆ**

ನೇಕಾರರು ಆಯಾ ಗ್ರಾಮಗಳಲ್ಲಿ ರಚಿಸಿಕೊಂಡ ಸಂಘದ ಹೆಸರು 'ಸಾಲೆ ಸಾರ್ಸಿವರು' ಈ ಸಂಘದ ಪರ್ಯಾಯ ಪದ ಸಮಯ ಸಾಲಿಗರು 'ಜೇಡಗೊತ್ತಳಿ', 'ಪಟ್ಟಗಾರಿಸೇಣಿ' ಅಥವಾ 'ಪಟ್ಟಗಾರ ಸಮಯ' ಎಂಬ ವಿವಿಧ ಹೆಸರಿನ ಸಂಘಗಳನ್ನು ರಚಿಸಿಕೊಂಡಿದ್ದರು ರಾಜ ತೆರಿಗೆಯನ್ನು ಹೆಚ್ಚಿಸಿದಾಗ ಅವರ ವಿರುದ್ಧ ಒಟ್ಟಾಗಿ ಹೋರಾಟವನ್ನು ಮಾಡುತ್ತಿದ್ದರು.

**ವಸ್ತ್ರಗಳ ವೈವಿಧ್ಯತೆ**

ನೇಕಾರರು ಕಂಬಳಿ, ಜಮಖಾನ, ಪೇಟೆ, ಸೀರೆ, ದೋತಿ, ಪಂಚೆಗಳಿಗೆ ಪಟ್ಟಿಗಳನ್ನು ತಯಾರಿಸುತ್ತಿದ್ದರು ಹತ್ತಿ, ರೇಷ್ಮೆ, ಉಣ್ಣೆಯ ಬಟ್ಟೆಗಳನ್ನು ಹಾಗೂ ಅವುಗಳ ವಿವಿಧ ವಿನ್ಯಾಸಗಳನ್ನು ಮಾಡಿಸಿ ವಸ್ತ್ರಗಳನ್ನು ನೇಯುತ್ತಿದ್ದರು. ಹಬ್ಬ ಹರಿದಿನ, ಮದುವೆ, ಆಡಳಿತ ವರ್ಗ, ಆಸ್ಥಾನದ

ವರ್ಗದವರಿಗೆ ಅಗತ್ಯವಾದ ವಸ್ತ್ರಗಳು, ಧಾರ್ಮಿಕ ಕಾರ್ಯಗಳಿಗೆ ಬೇಕಾದ ವಸ್ತ್ರಗಳು ಹೀಗೆ ವಿವಿಧ ಸಂದರ್ಭಗಳನ್ನು ಸೂಚಿಸುವ ವಸ್ತ್ರಗಳನ್ನು ನೇಯುತ್ತಿದ್ದರು ಹಾಗಾಗಿ ನೇಕಾರರು ನೇಯುತ್ತಿದ್ದ ವಸ್ತ್ರ ವೈವಿಧ್ಯತೆಯೂ ಜಾತಿ, ವೃತ್ತಿ, ಧರ್ಮ, ಲಿಂಗ ಸಾಮಾಜಿಕ ಹಾಗೂ ಆರ್ಥಿಕ ಅಂತಸ್ತನ್ನು ಪ್ರತಿನಿಧಿಸುತ್ತದೆ.

**ಒಡೆಯರ ಕಾಲದ ನೇಯ್ಗೆ ತಂತ್ರಜ್ಞಾನ**

ಭಾರತದ ಇತರ ಭಾಗಗಳಂತೆ ಕರ್ನಾಟಕದಲ್ಲಿಯೂ ಕೃಷಿಯ ನಂತರದ ಸ್ಥಾನವಿರುವುದು ನೇಕಾರರಿಗೆ. ನೇಯ್ಗೆ ಕಾಯಕ ಲಕ್ಷಾಂತರ ಜನರ ಜೀವನದ ಉಸಿರಾಗಿದೆ. ಹತ್ತಿಯಿಂದ ರಾಟೆಯಲ್ಲಿ ನೂಲು ತೆಗೆಯುತ್ತಿದ್ದರು ರಾಟೆಯ ವಿವಿಧ ಭಾಗಗಳೆಂದರೆ ಅಡಿಯ ಹಲಗೆ, ತೋರಣ ಗೊಂಬೆ, ಸೂತ್ರಕರ್ಣ ಮತ್ತು ಕದಿರು ರಾಟೆಯನ್ನು ಕೈಯಲ್ಲಿ ಹಿಡಿದು ತಿರಿಗಿಸುತ್ತ ನೂಲು ತೆಗೆಯುತ್ತಿದ್ದರು. ಆ ನೂಲು ಕದಿರಿನಲ್ಲಿ ಸುತ್ತಿಕೊಳ್ಳುತ್ತಿತ್ತು ನೂಲು ತೆಗೆದು ಬಿಡಿಸಿ ಸ್ವಚ್ಛ ಮಾಡಲು ಹಂಜಿಯನ್ನು ಉಪಯೋಗಿಸುತ್ತಿದರು. ನೂತ ನೂಲನ್ನು ನೇಯ್ಗೆಯವರಿಗೆ ಮಾರುತ್ತಿದ್ದರು ನೂಲುವುದಕ್ಕಾಗಿ ಹತ್ತಿಯನ್ನು ಕೊಳ್ಳುತ್ತಿದ್ದರು ಹತ್ತಿಯಿಂದ ನೂಲು ತೆಗೆಯುವವರನ್ನು ಕದಿರಿ ಕಾಯಕದವರು ಎಂದು ಕರೆಯುತ್ತಿದ್ದರು. ಕ್ರಿ.ಶ 1800 ರಲ್ಲಿ ಮೈಸೂರು ಸಂಸ್ಥಾನದಾದ್ಯಂತ ಪ್ರವಾಸ ಮಾಡಿ ಇಲ್ಲಿನ ವಿವಿಧ ಆರ್ಥಿಕ ಚಟುವಟಿಕೆಗಳ ಬಗ್ಗೆ ವಿಶೇಷವಾಗಿ ಗುಡಿ ಕೈಗಾರಿಕೆಗಳ ಬಗ್ಗೆ ವಿವರವಾದ ವರದಿಯನ್ನು 'A journey from Madras through the countries of Mysore, Canara and Malbar' ಎಂಬ ಕೃತಿಯಲ್ಲಿ ದಾಖಲಿಸಿದ್ದಾನೆ. ವರದಿಯ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಪ್ರಮುಖವಾದ ಗುಡಿ ಕೈಗಾರಿಕೆಯೆಂದರೆ ಹತ್ತಿಬಟ್ಟೆ ತಯಾರಿಕೆಯಾಗಿತ್ತು ಯಥೇಚ್ಛವಾಗಿ ಬೆಳೆದ ಕಚ್ಚಾ ಹತ್ತಿಯನ್ನು ಮಗ್ಗೆ, ಮಳಲಿ, ಸೋಗಹಳ್ಳಿ, ಸರಗೂರು, ಮುಳ್ಳೂರು, ಹಬ್ಬಲಗುಪ್ಪೆ ಮುಂತಾದ ಭಾಗಗಳಲ್ಲಿ ಸ್ಥಳೀಯ ಜನರು ಕೈಮಗ್ಗಗಳಿಂದ ಬಟ್ಟೆ ತಯಾರಿಸುತ್ತಿದ್ದರು. ಅಂದಿನ ಕಾಲದ ನೇಯ್ಗೆ ಅಥವಾ ಜವಳಿ ಉದ್ದಿಮೆಯಲ್ಲಿ ಮಹಿಳೆಯರೂ ಸಹ ಪಾಲ್ಗೊಂಡು ನೂಲುತ್ತಿದ್ದರು ಮತ್ತು ನೇಯುತ್ತಿದ್ದರು. ಈ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದ ಜಾತಿಯನ್ನು ದೇವಾಂಗ ಹಾಗೂ ತೊಗಟರೆಂದೂ ಕರೆಯುತ್ತಿದ್ದರು.

ಈ ನೇಕಾರರು ನರಸೀಪುರ, ಹೊರಮರಳಿ, ಮಟಕರೆ ಮುಂತಾದ ಕೇಂದ್ರಗಳಲ್ಲಿ ಬಿಳಿ ಮತ್ತು ವಿವಿಧ ಬಣ್ಣಗುಳುಳ್ಳ ಒರಟಾದ ನೂಲಿನಿಂದ ವಸ್ತ್ರವನ್ನು ನೇಯುವವರು ಜೇಡರು. ಇವರು ನೂಲನ್ನು ಗಂಜಿಯಲ್ಲಿ ಅದ್ದಿ ಅದನ್ನು 'ಹಾಸುಮಣಿ' ಎಂಬ ಮರದ ಚೌಕಟ್ಟಿಗೆ ಕಟ್ಟುತ್ತಿದ್ದರು ಹೀಗೆ ಕಟ್ಟಿದ ನೂಲನ್ನು ಹುರಿಗೊಳಿಸುವುದಕ್ಕಾಗಿ ತಿರಿಗಿಸುತ್ತಿದ್ದರು, ನೇಯುವುದಕ್ಕಾಗಿ ಮಗ್ಗದಲ್ಲಿ ಉದ್ದುದ್ದವಾಗಿ ಹಾಸಿದ ನೂಲಿನ ಹಾಸನ್ನು ಉಂಕಿ ಎಂದು ಕರೆಯುತ್ತಿದ್ದರು. ಹೀಗೆ ಉಂಕೆಯನ್ನು ಮಾಡುವಾಗ ಅದನ್ನು ಶುಭ್ರಗೊಳಿಸುವುದಕ್ಕೆ ಕುಂಚಿಗೆಯನ್ನು ಬಳಸುತ್ತಿದ್ದರು ಮಗ್ಗದ ಹಾಸಿದ ಮೇಲೆ ಕಟ್ಟಬೇಕಾದ ನಿರ್ದಿಷ್ಟ ಸಂಖ್ಯೆಯ ನೂಲಿಗೆ 'ಅಣಿ' ಎಂಬ ಹೆಸರಿತ್ತು ಇದನ್ನು ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಜೋಡಿಸಿ ಕಟ್ಟುವುದನ್ನು 'ಅಣಿಕಟ್ಟು' ಎಂದು ಕರೆಯುತ್ತಾರೆ ಉದ್ದುದ್ದವಾಗಿರುವ ನೂಲನ್ನು 'ಹಾಸು' ಎಂದು ಅಡ್ಡಡ್ಡವಾಗಿರುವ ನೂಲನ್ನು 'ಹೊಕ್ಕು' ಎಂದು ಹೆಸರಿನಿಂದಲೇ ಕರೆಯುತ್ತಿದ್ದರು ಇವರೆಡೂ ಬೆರೆತು ವಸ್ತ್ರವಾಗುತ್ತಿತ್ತು ಹೇಗೆ ಹಾಸು ಹೊಕ್ಕುಗಳನ್ನು ಸೇರಿಸಲು ಬಳಸುತ್ತಿದ್ದ ನೂಲಿನ ಉಂಡೆಯನ್ನು 'ಕಂಡಿಕೆ' ಎಂದೂ ಕಂಡಿಕೆಯನ್ನು ಸೇರಿಸುವುದಕ್ಕಾಗಿ ಉಪಯೋಗಿಸುತ್ತಿದ್ದ ಕೊಕ್ಕೆಯನ್ನು 'ಮುಳ್ಳು'

ಅಥವಾ 'ಕಂಡಿಕೆಯ ಮುಳ್ಳು' ಎಂದು ಕರೆಯುತ್ತಿದ್ದರು ಇನ್ನೂ ನೇಕಾರಿಯನ್ನೇ ನಂಬಿಕೊಂಡ ಸಾವಿರಾರು ಕುಟುಂಬಗಳು ಕರ್ನಾಟಕದಲ್ಲಿದ್ದವು.

ಮೈಸೂರು ಒಡೆಯರ ಕಾಲದ ನೇಕಾರರು ತಾವು ನೇಯ್ದ ವಸ್ತ್ರವನ್ನು ಸಂತೆಗಳಲ್ಲಿ ಮಾರಟ ಮಾಡುತ್ತಿದ್ದರು ದಳವಾಯಿ ನಂಜರಾಜಯ್ಯನ ಕಾಲದಲ್ಲಿ ಹೊಳೆ ನರಸೀಪುರ, ಹಾಸನ, ಸಾಲಿಗ್ರಾಮ, ಕೇರಳಾಪುರ, ಕೊಣನೂರು, ಹರಪನಹಳ್ಳಿ, ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ, ಗುಬ್ಬಿ, ಬೇಲೂರುಗಳಲ್ಲಿ ನಡೆಯುತ್ತಿದ್ದ ಸಂತೆಗಳು ಹೆಸರುವಾಸಿಯಾಗಿದ್ದವು. ಜನಪದರು ಹಾಡುತ್ತಿದ್ದ 'ಒಸಗೆ' ಪದವೊಂದರಲ್ಲಿ ಬೇಲೂರಿನ ಸಂತೆ ಬಗ್ಗೆ ಉಲ್ಲೇಖವಿದೆ.

***"ಬೇಲೂರು ಸಂತೇಲಿ ಹೋಳಡಿಕೆ ಮಾರೋನೆ***

***ರಾಯನಿನ ಸೊಸೆ ಮೈಯ್ಯ ನೆರೆತೋ ಮಾವಯ್ಯ***

***ಹೋಳಡಿಕೆ ತಿದ್ದೋ ಪ್ರಜೆಗಳಲ್ಲಿ***

ಎಂಬುದಾಗಿ ಬೇಲೂರಿನ ಸಂತೆಯ ಹೋಳಡಿಕೆ ಬಗ್ಗೆ ಈ ಎಲ್ಲಾ ಸಂತೆಗಳು ಅಂದಿನಿಂದ ಇಂದಿನವರೆಗೂ ಮುಂದುವರೆದುಕೊಂಡು ಬಂದಿರುವುದನ್ನು ಗಮನಿಸಬಹುದು"

ಮೈಸೂರಿನಲ್ಲಿ ನೇಕಾರರ ವ್ಯಾಪರಕ್ಕಾಗಿಯೇ ಜವಳಿ ವ್ಯಾಪರದ ಪ್ರತ್ಯೇಕ ಮಳಿಗೆಗಳಿದ್ದವು ಈ ಕುರಿತು ಕಂಠೀರವ ನರಸರಾಜ ವಿಜಯದಲ್ಲಿ ಹೀಗೆ ವರ್ಣಿಸಿದೆ.

***"ಹಳದಿ ಪೊಪ್ಪಳಿ ಚಂದ್ರಗಾವಿ ಬೊಂಬೆಯ ಬಣ್ಣ***

***ಸರಿಪಲ್ಲು ಹೊನ್ನ ತಗಡಿನ***

***ಬೆಳವಟ್ಟೆ ನಾನಾವರ್ಣದ***

***ಜವಳಿಯ ಮಳಿಗೆಗಳೆಸದುವರ್ತಿಯಲ್ಲಿ"***

ಹೀಗೆ ವಸ್ತ್ರ ವ್ಯಾಪರಕ್ಕೆ ಸಂಬಂಧಿಸಿದಂತೆ ವಿವಿಧ ಬಣ್ಣ, ವಿನ್ಯಾಸವಿರುವ ಹಾಗೂ ಬಟ್ಟೆಗಳಿಗೆ ಚಿತ್ರಗಳನ್ನು ಒತ್ತುವಂತಹ ಪ್ರತ್ಯೇಕ ಅಂಗಡಿ ಮಳಿಗೆಗಳಿದ್ದವು ಎಂಬುದಾಗಿ ತಿಳಿದು ಬರುತ್ತದೆ.

ಮೈಸೂರು ಸಂಸ್ಥಾನದ ಪ್ರಮುಖ ನೇಕಾರಿಕೆಯ ಪ್ರದೇಶವಾಗಿದ್ದ ಚಿತ್ರದುರ್ಗದಲ್ಲಿ 'ಹಂಜಿ ಕೇಂದ್ರ'ವಿತ್ತು. ಒಡೆಯರ ಕಾಲದಲ್ಲಿ ನೇಕಾರರಿಗೆ ನೇಯಲು ಬೇಕಾಗುತ್ತಿದ್ದ ಕಾಳು ಬೇರ್ಪಡಿಸಿದ ಹತ್ತಿ ರವಾನೆಯಾಗುತ್ತಿದ್ದು ಇಲ್ಲಿದಂದಲೆ. 68 ರೂಪಾಯಿಗೆ ಒಂದು ಕೆ.ಜಿ ಹತ್ತಿ ಸಿಗುತ್ತಿತ್ತು. ನೇಕಾರರು ಚರಕದಲ್ಲಿ ತಯಾರಿಸುವ ಕಚ್ಚಾ ನೂಲನ್ನು 'ಲಡಿ' ಎಂದು ಕರೆಯುತ್ತಾರೆ. ಒಂದು ಲಡಿ ಎಂದರೆ 1 ಸಾವಿರ ಮೀಟರ್ ಉದ್ದದ ನೂಲು ಈ ರೀತಿ ತಯಾರಾಗುವ ಲಡಿಗಳ ಲೆಕ್ಕದಲ್ಲಿ ಸಂಬಳ ಸಿಗುತ್ತದೆ. ಒಂದು ಲಡಿಗೆ 1.75 ರೂಪಾಯಿ ನೇಕಾರನಿಗೆ ನಿಗದಿಯಾಗುತ್ತದೆ. ಈ ಲಡಿಗಳನ್ನು ನೇಯ್ಗೆ ಕೇಂದ್ರಗಳಲ್ಲಿ ಖಾದಿ ಬಟ್ಟೆಯನ್ನಾಗಿ ಪರಿವರ್ತಿಸಲಾಗುತ್ತದೆ. ಸಾಕಷ್ಟು ದೈಹಿಕ ಶ್ರಮ, ತಾಳ್ಮೆಯನ್ನು ಬೇಡುವ ಕೆಲಸವಿದು ಆದ್ದರಿಂದಲೇ ನೇಕಾರನಾಗಲು ಜನ ಹಿಂದೇಟು ಹಾಕುತ್ತಾರೆ. ಮೈಸೂರು ಸಂಸ್ಥಾನದಲ್ಲಿ ನೂಲುವುದು ಮತ್ತು ನೇಯುವುದನ್ನು ನೇಯ್ಗೆ, ಕೈಮಗ್ಗ, ಮಗ್ಗದ ಉದ್ದಿಮೆ ಎಂದು ಕರೆಯುತ್ತಿದ್ದರು.

ಮೈಸೂರಿನಲ್ಲಿ ಹತ್ತಿಬಟ್ಟೆ ತಯಾರಿಸುತ್ತಿದ್ದ ಮಾಹಿತಿಯನ್ನು ಬುಕಾನನ್ ತನ್ನ ವರದಿಯಲ್ಲಿ ದಾಖಲಿಸಿದ್ದಾನೆ. ಕ್ರಿ.ಶ 1800ನೇ ಇಸವಿಯಲ್ಲಿ ಒಂದು ಖಾದಿ ಸೀರೆ ಎರಡರಿಂದ ಆರು ಪಣಂ ಹಣಕ್ಕೆ ಮಾರಾಟವಾಗುತಿತ್ತು. ಪ್ರತಿ ಸಂತೆಯಲ್ಲಿಯೂ ಸರಾಸರಿ ನೂರಕ್ಕೂ ಮೀರಿ ಮಾರಟವಾಗುತ್ತಿದ್ದವು.

**ರೇಷ್ಮೆ ನೇಯ್ಗೆ ಕಾರ್ಖಾನೆ**

ರೇಷ್ಮೆ ಎಂಬ ಪದವನ್ನು ಕೇಳಿದೊಡನೆ ನುಣುಪು, ಮೃದು, ಆಕರ್ಷಣೆ, ಮೌಲ್ಯ, ಮತ್ತು ಪ್ರತಿಷ್ಠೆಯ ಭಾವ ಮೂಡುತ್ತದೆ. ಕಚ್ಚಾ ಹತ್ತಿಯಿಂದ ನೂಲು ತೆಗೆದು ವಿವಿಧ ರೀತಿಯ ಬಟ್ಟೆಗಳನ್ನು ತಯಾರಿಸಲಾಗುತ್ತಿತ್ತು ಪಟ್ಟಸೀರೆ, ದೋತಿ, ತೆರೆಸೀರೆ, ಹೊದಿಕೆ, ಉತ್ತಮ ಪೊಂಬಟ್ಟೆ, ಕಟ್ಟಿದ ನೂಲ್‌ಪಟ್ಟಿ, ದಾರೆಸೀರೆ, ಮುಂತಾದವುಳನ್ನು ತಯಾರಿಸಲಾಗುತ್ತಿತ್ತು ಸಂಸ್ಥಾನದ ನೇಕಾರರು ಹತ್ತಿ ಉಡುಪುಗಳನ್ನು ತಯಾರಿಸಿ ಹತ್ತಿ ನೂಲಿನೊಂದಿಗೆ ರೇಷ್ಮೆ, ಬೆಳ್ಳಿ, ಚಿನ್ನದ ದಾರಗಳನ್ನು ಸೇರಿಸಿ ಜರಿ ಸಿದ್ಧಪಡಿಸುತ್ತಿದ್ದರು ಜೊತೆಗೆ ಅಮೂಲ್ಯ ಹರಳುಗಳನ್ನು ಮತ್ತು ಹವಳ ಇತ್ಯಾದಿಗಳನ್ನು ಹೆಣೆದು ಉಡುಪಿನ ಮೇಲೆ ವಿವಿಧ ರೀತಿಯ ಚಿತ್ರಗಳನ್ನು ಬಿಡಿಸಲಾಗುತ್ತಿತ್ತು. ಈ ರೀತಿಯ ಬೆಲೆ ಬಾಳುವ ಹತ್ತಿ ಉಡುಪುಗಳನ್ನು ಶ್ರೀಮಂತರು, ಅರಸು ಮನೆತನದವರು ಧರಿಸುತ್ತಿದ್ದರು. ಹತ್ತಿ ಬಟ್ಟೆಯಂತೆಯೇ ರೇಷ್ಮೆಬಟ್ಟೆ ತಯಾರಿಕೆಯಲ್ಲೂ ಸಂಸ್ಥಾನದ ಪಟ್ಟಗಾರರು ನಿಪುಣರೆನಿಸಿದ್ದರು ಮೊಳಕಾಲ್ಮೂರಿನ ರೇಷ್ಮೆ ಬಟ್ಟೆಗೆ ಅತ್ಯಂತ ಬೇಡಿಕೆಯಿತ್ತು

ಮೈಸೂರಿನ ಕಾರ್ಖಾನೆಯಲ್ಲಿ ನೇಕಾರರು ತಯಾರಿಸುವ 'ಕ್ರೇಪ್ ಡಿಸೈನ್' ಮತ್ತು 'ಜಾರ್ಜೆಟ್ ಸೀರೆಗಳು' ಪ್ರಪಂಚದಲ್ಲೇ ಪ್ರಸಿದ್ಧವಾಗಿವೆ ಈ ಸೀರೆಗಳನ್ನು ಅಮೆರಿಕಾದ ಯುವತಿಯರು 'ಇಂಡಿಯನ್ ಸ್ಟೈಲ್' ಎಂದು ಮೆಚ್ಚಿ ಧರಿಸುತ್ತಾರೆ. ಮೈಸೂರು ಸಿಲ್ಕ್ ಫ್ಯಾಕ್ಟರಿಯಲ್ಲಿ 541 ಮಂದಿ, ತಿರುಮಲಕೂಡಲು ನರಸೀಪುರದ ರೇಷ್ಮೆ ನೂಲು ತೆಗೆಯುವ ಘಟಕದಲ್ಲಿ 155 ಮಂದಿ, ಮಾರಾಟ ಮಳಿಗೆಗಳು ಹಾಗೂ ಕೇಂದ್ರ ಕಛೇರಿಯಲ್ಲಿ 88 ಮಂದಿ ಸಿಬ್ಬಂದಿಗಳಿದ್ದಾರೆ.

ಸಮಕಾಲೀನ ಕೃತಿ ಸೌಂದರ್ಯ ಕಾವ್ಯದಲ್ಲಿ ಕವಿ ನೂರೊಂದು ನರ್ತಕಿಯರ ವಸ್ತ್ರಗಳ ಬಗೆಗೆ ವರ್ಣಿಸಿದ್ದು, ನರ್ತಕಿಯರು ಮುತ್ತು ರತ್ನ, ಅಮೂಲ್ಯ ಹರಳು, ಚಿನ್ನ ಮತ್ತು ಬೆಳ್ಳಿ ದಾರಗಳಿಂದ ಹೆಣೆದ ಸೀರೆಗಳನ್ನು ಧರಿಸುತ್ತಿದ್ದುದಾಗಿ ತಿಳಿಸಿದ್ದಾನೆ.

ಜಯಚಾಮರಾಜೇಂದ ಒಡೆಯರ್ ಕಾಲದಲ್ಲಿ ನೇಕಾರರ ವಸ್ತ್ರಗಳ ಉತ್ಪಾದನೆಯು ಪ್ರಗತಿಯಲ್ಲಿತ್ತು. ಬದನವಾಳ್ ಗ್ರಾಮದ ಕೇಂದ್ರವೊಂದರಲ್ಲೇ 4200ಜನ ನೂಲುವ ಮತ್ತು 150ಜನ ನೇಯುವ ನೇಕಾರರಿದ್ದರು. ಇದಲ್ಲದೆ ಕೋಲಾರ, ಹೊಸೂರು, ನೆಲಮಂಗಲ, ಅಜ್ಜಂಪುರ, ತಗಡೂರು ಮುಂತಾದ ಖಾದಿ ಕೇಂದ್ರದಲ್ಲೂ ಸಾವಿರಾರು ಜನರು ನೂಲುವ ಮತ್ತು ನೇಯುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ವೆಂಕಟರಮಣ ಶೆಟ್ಟಿ, ಸಿಂಗಚಾರಿ, ಭಾಸ್ಕರ ಚಾರಿ, ಬಟ್ಟಚಾರಿ, ವೀರಪ್ಪ ಚಾರಿ, ಪುಟ್ಟಸ್ವಾಮಿ ಆಚಾರಿ, ಗುರಿಕಾರ್ ಶೇಷಾದ್ರಿರಾವ್, ಚಲುವಚಾರಿ, ವೆಂಕಟಸ್ವಾಮಿ, ಸುಬ್ಬಾಚಾರಿ, ಶ್ರೀನಿವಾಸ ಆಚಾರಿ ಮುಂತಾದವರು ಮೈಸೂರು ಒಡೆಯರ ಕಾಲದಲ್ಲಿ ನಾಡಿನ ಅಧಿದೇವತೆ ಚಾಮುಂಡಿಯನ್ನೊಳಗೊಂಡಂತೆ ಇತರ ದೇವರುಗಳಿಗೂ ವಸ್ತ್ರಗಳನ್ನು ತಯಾರಿಸುತ್ತಿದ್ದರು.

**ಉಪಸಂಹಾರ**

ಹೀಗೆ ಮೈಸೂರು ಒಡೆಯರ ಕಾಲದಲ್ಲಿ ನೇಕಾರಿಕೆ ಸಮುದಾಯ ತನ್ನ ಮೂಲ ಕಸುಬನ್ನು ಅನುಸರಿಸಿಕೊಂಡು ನೆಮ್ಮದಿಯಿಂದ ಜೀವನ ನಿರ್ವಹಣೆ ಮಾಡುತ್ತಿದ್ದನ್ನು ಅರಿಯಬಹುದಾಗಿದೆ. ಆದರೆ ವಿವಿಧ ಕಾರಣಗಳಿಂದ ಇಂದಿನ ದಿನಮಾನಗಳಲ್ಲಿ ಸಾಂಪ್ರದಾಯಿಕ ನೇಕಾರ ವೃತ್ತಿಯು ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿದ್ದು, ಅವರು ಉತ್ಪಾದಿಸಿದ ವಸ್ತುಗಳಿಗೆ ಬೇಡಿಕೆಯಿಲ್ಲದ ಕಾರಣ ಕಷ್ಟದ ಜೀವನ ನಡೆಸುತ್ತಿರುವುದನ್ನು ಕಾಣಬಹುದಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಮಂಜಪ್ಪ ಶೆಟ್ಟಿ ಮಸಗಲಿ. (2006). *ಮೈಸೂರು ಅರಮನೆ.* ಕಾವ್ಯಾಲಯ ಪ್ರಕಾಶನ.
- ಮಂಜುನಾಥ ಜಿ. ಜಿ. (ಸಂ.) (1995). *ತಿಮ್ಮಯ್ಯ ಶಾಸ್ತ್ರಿ ವಿರಚಿತ ರಾಜವಂಶ ರತ್ನಕ ಪ್ರಭ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಶಾಮಶಾಸ್ತ್ರಿ ಆರ್. (1926). ಕಂಠೀರರವ ನರಸರಾಜ ವಿಜಯಂ (ಗೋವಿಂದ ವೈದ್ಯ). ಮೈಸೂರು ವಿಶ್ವವಿದ್ಯಾಲಯ.
- ಶ್ರೀಧರ ಸಿ.ವಿ. (2000). *ಮೈಸೂರು ಒಡೆಯರ ಮತ್ತು ಕರ್ನಾಟಕ ಸಂಸ್ಕೃತಿ.* ಸಂಸ್ಕೃತಿ ಬುಕ್ ಪಾರಡೈಸ್.
- *ಸಾದ್ವಿ ಪತ್ರಿಕೆ ಕಡತಗಳು ಮತ್ತು ಜನಾನ ಸಮೂಕ ಕಡತಗಳು.* ಮೈಸೂರು ಪತ್ರಗಾರ ಇಲಾಖೆ.
- ಸುಧಾಮಣಿ ಬಿ.ವಿ. (2009). *ದಳವಾಯಿ ನಂಜರಾಜಯ್ಯನ ಕಾಲದ ಮೈಸೂರು.* ಅನನ್ಯ ಪ್ರಕಾಶನ.
- ಸೂರ್ಯನಾಥ ಕಾಮತ್. (1984). *ಕರ್ನಾಟಕ ರಾಜ್ಯ ಗೆಜೆಟಿಯರ್.* ಕರ್ನಾಟಕ ಸರ್ಕಾರ, ಬೆಂಗಳೂರು.
- Francis Buchanan (1807). *A Journey from Madras Through the Countries of Mysore, Canara, and Malabar*. (vol.2), W. Bulmer and Company.